**ದಿನಾಂಕಃ 14-09-2023** **ಓ ಎಸ್ ನಂ.107/2020(ಪಿ.ಡಬ್ಲ್ಯೂ 1)**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಪಾಟೀ ಸವಾಲುಃ</u>** ಶ್ರೀ ಆರ್ ಬಿ ಪಿ ವಕೀಲರಿಂದ 1 ಮತ್ತು 2 ನೇ ಪ್ರತಿವಾದಿಯರ ಪರಃ

ನನ್ನ ಅಜ್ಜ ರಾಮಾ ಇತನು ಒಮ್ಮೆ ಬಿದ್ದು ಕಾಲು ಮುರಿದಿಕೊಂಡಿದ್ದ ನಂತರ ಪುನಃ ಬಿದ್ದು ಅದೇ ಕಾಲು ಮುರಿದುಕೊಂಡಿದ್ದ. ನನ್ನ ಅಜ್ಜನಿಗೆ ವಯಸ್ಸಾಗಿದ್ದರಿಂದ ಮತ್ತು ಕಾಲು ಮುರಿದಿದ್ದರಿಂದ ಹಾಸಿಗೆ ಹಿಡಿದಿದ್ದ. ನನ್ನ ಅಜ್ಜನಿಗೆ ಕಾಲು ಮುರಿದಾಗ 81 ವರ್ಷ ವಯಸ್ಸು ಆಗಿತ್ತು. ಆ ಕಾಲಕ್ಕೆ ನನ್ನ ಅಜ್ಜನಿಗೆ ಮಾತನಾಡಲು ಮಾತ್ರ ಬರುತ್ತಿತ್ತು ಆದರೆ ಯಾವುದೇ ವ್ಯವಹಾರ ಜ್ಞಾನ ಇರಲಿಲ್ಲಾ. ಆ ಕಾಲಕ್ಕೆ ನಮ್ಮ ಮನೆಯಲ್ಲಿ ಆದ ಯಾವುದೇ ವ್ಯವಹಾರದ ಬಗ್ಗೆ ನನ್ನ ಅಜ್ಜನಿಗೆ ಅರಿವು ಇರಲಿಲ್ಲಾ. ನನ್ನ ಅಜ್ಜನಿಗೆ ನಾವು ಸಹ ಮನೆತನದ ಯಾವುದೇ ವ್ಯವಹಾರದ ಬಗ್ಗೆ ಹೇಳಿಲ್ಲಾ. ಸಾಕ್ಷಿ ಪುನಃ ಹೇಳುವುದೆನೆಂದರೆ ನನ್ನ ಅಜ್ಜ 1981 ನೇ ಇಸ್ವಿಯಲ್ಲಿ ಬಿದ್ದು ಕಾಲು ಮುರಿದುಕೊಂಡಿರಲಿಲ್ಲಾ 1991 ರಲ್ಲಿ ಬಿದ್ದು ಕಾಲು ಮುರಿದುಕೊಂಡಿದ್ದ.ನನ್ನ ಅಜ್ಜ ಮೊದಲಿಗೆ 1987 ರಲ್ಲಿ ಬಿದ್ದು ಕಾಲು ಮುರಿದುಕೊಂಡಿದ್ದ. 1987 ರಿಂದ 1991 ರವರೆಗೆ ಕೋಲಿನ ಸಹಾಯದಿಂದ ನಡೆದಾಡುತ್ತಿದ್ದ. ನಂತರ 1991 ರಲ್ಲಿ ಬಿದ್ದು ಕಾಲು ಮುರಿದುಕೊಂಡಾಗ ಹಾಸಿಗೆ ಹಿಡಿದಿದ್ದ.ಆನಂತರ ನನ್ನ ಅಜ್ಜ ಹೊರಗಡೆ ಹೋಗಿ ಯಾವುದೇ ವ್ಯವಹಾರ ಮಾಡಿಲ್ಲಾ ಅಂದರೆ ನಿಜ. ನನ್ನ ಅಜ್ಜ ತನ್ನ 81 ವರ್ಷ ವಯಸ್ಸಿಗಿಂತ ಮೊದಲು ಯಾವ ಯಾವ ವ್ಯವಹಾರ ಮಾಡಿದ್ದ ಅಂತಾ ನನಗೆ ಗೋತ್ತಿಲ್ಲಾ ಏಕೆಂದರೆ ನಾನು ಆಗ ಚಿಕ್ಕವನಿದ್ದೆ. ನನಗೆ 20 ವರ್ಷ ವಯಸ್ಸು ಆದ ನಂತರ ನನ್ನ ಅಜ್ಜ ನನ್ನ ಹೆಸರಿಗೆ ಬರೆದುಕೊಟ್ಟ ಮೃತ್ಯು ಪತ್ರದ ಬಗ್ಗೆ ನನಗೆ ಗೋತ್ತಾಗಿತ್ತದೆ. ಸದರಿ ಮೃತ್ಯು ಪತ್ರ ನಾನು ಓದಿ ನೋಡಿದ್ದೆನೆ. ಮೃತ್ಯು ಪತ್ರದಲ್ಲಿ ನನ್ನ ಅಜ್ಜ ತನ್ನ ಹೆಣ್ಣು ಮಕ್ಕಳಿಗೆ ಕೊಡಬೇಕಾದ್ದನ್ನು ಈಗಾಗಲೇ ಕೊಟ್ಟಿದ್ದೆನೆ ಅಂತಾ ಬರೆದಿದ್ದಾನೆ ಅಂದರೆ ನಿಜ. ತನ್ನ ಹೆಣ್ಣು ಮಕ್ಕಳಿಗೆ ನನ್ನ ಅಜ್ಜ ಯಾವ ಯಾವ ಆಸ್ತಿಗಳನ್ನು ಕೊಟ್ಟಿದ್ದ ಅಂತಾ ನನಗೆ ಗೋತ್ತಿಲ್ಲಾ. ನಾನು ವಯಸ್ಕನಾದ ನಂತರ ನನ್ನ ತಾಯಿ ಮತ್ತು ನನ್ನ ಚಿಕ್ಕಮ್ಮನಿಗೆ ನನ್ನ ಅಜ್ಜ ಯಾವ

ಯಾವ ಆಸ್ತಿ ಕೊಟ್ಟಿದ್ದಾನೆ ಅಂತಾ ನಾನು ಕೇಳಿಲ್ಲಾ. ನನ್ನ ಚಿಕ್ಕಮ್ಮ ನಾಗುಬಾಯಿ ಹಿಟ್ನಿ ಗ್ರಾಮದಲ್ಲಿ ಈಗಲೂ ವಾಸ ಇದ್ದಾಳೆ. ಈ ಕೇಸಿನಲ್ಲಿ ಸದರಿ ನಾಗುಬಾಯಿಯನ್ನು ಸೇರಿಸಿಲ್ಲಾ. ನನ್ನ ಅಜ್ಜ ರಾಮಾಹರಿ ಇತನ ಹೆಣ್ಣು ಮಕ್ಕಳಾದ ನನ್ನ ತಾಯಿ ಮತ್ತು ಸದರಿ ನಾಗುಬಾಯಿಯನ್ನು ಈ ಕೇಸಿನಲ್ಲಿ ಸೇರಿಸಲು ನನಗೆ ಯಾವುದೇ ತೊಂದರೆ ಇಲ್ಲಾ. ಮೃತ್ಯು ಪತ್ರದಲ್ಲಿ ನನಗೆ ಶಿಪ್ಪೂರ ಗ್ರಾಮದ ಸರ್ವೆ ನಂಃ 615 ಮತ್ತು ತವನಿದಿ ಗ್ರಾಮದ ಸರ್ವೆ ನಂಃ 19/3 , 45/1 , 59/5+4, 60, 16/7 , 38/2/3, 27/11 ಮತ್ತು 36/2 ನೇದ್ದರ ಆಸ್ತಿಗಳನ್ನು ಕೊಟ್ಟಿರುತ್ತಾರೆ ಇವುಗಳನ್ನು ಹೊರತುಪಡಿಸಿ ಬೇರೆ ಅಸ್ತಿಗಳು ಬಂದಿವೆ ಅವುಗಳ ಸರ್ವೆ ನಂಬರ ಗೋತ್ತಿಲ್ಲಾ. ಶಿಪ್ಪೂರ ಗ್ರಾಮದ ಸರ್ವೆ ನಂಃ 615 ಜಮೀನು ಸಂಪೂರ್ಣವಾಗಿ ನನಗೆ ಬಂದಿದೆ, ಉಳಿದ ಆಸ್ತಿಗಳಲ್ಲಿ ಕೇಲವು ಭಾಗ ನನಗೆ ಕೊಟ್ಟಿರುತ್ತಾರೆ. ಅಂದರೆ ½ , ¼ ಹೀಗೆ ನನಗೆ ಕೋಟ್ಟಿದ್ದಾರೆ. ಯಾವ ಯಾವ ಜಮೀನುಗಳನ್ನು ನನಗೆ ಎಷ್ಟು ಭಾಗ ಕೊಟ್ಟಿದ್ದಾರೆ ಅಂತಾ ನಿಕರವಾಗಿ ನನಗೆ ಹೇಳಲು ಬರುವುದಿಲ್ಲಾ. ಮೃತ್ಯು ಪತ್ರದಲ್ಲಿ ಬರೆದ ವಿಷಯ ಸುಳ್ಳು ಇದೆ ಅಂದರೆ ಸರಿಯಲ್ಲ . ಮೃತ್ಯು ಪತ್ರದ ಕೇಲವೊಂದು ಆಸ್ತಿಗಳಿಗೆ ನನ್ನ ಅಜ್ಜ ರಾಮಾಹರಿ ಮಾಲಿಕ ಇರಲಿಲ್ಲಾ ಅಂದರೆ ಸರಿಯಲ್ಲ. ಮೃತ್ಯು ಪತ್ರದಲ್ಲಿ ಬರೆದ ಅಸ್ತಿಗಳನ್ನು ಹೊರತುಪಡಿಸಿ ಬೇರೆ ಯಾವ ಆಸ್ತಿಗಳನ್ನು ನನ ಹೆಸರು ರಾಮಾಹರಿ ಬರೆದುಕೊಟ್ಟಿಲ್ಲಾ. ನನ್ನ ತಂದೆ ನನ್ನ ಅಜ್ಜನ ಜೊತೆ ಮಿಲಾಪಿಯಾಗಿ ನನ್ನ ಅಜ್ಜನ ಹೆಣ್ಣು ಮಕ್ಕಳಿಗೆ ಆಸ್ತಿ ಕೊಡಬಾರದು ಅನ್ನುವ ದುರುದ್ದೇಶದಿಂದ ಸುಳ್ಳು ಮೃತ್ಯು ಪತ್ರ ಅನ್ನುವ ಕಾಗದ ಹುಟ್ಟಿಸಿಕೊಂಡಿದ್ದಾರೆ ಅಂದರೆ ಸರಿಯಲ್ಲ. ದಾವೇದ ಆಸ್ತಿಗಳಿಗೆ ಸಂಬಂದಿಸಿದಂತೆ ನನ್ನ ಅಜ್ಜ ರಾಮಾ ಮತ್ತು ಆತನ ಇಬ್ಬರೂ ಸಹೋದರರಾದ ಲಕ್ಷ್ಮಣ ಮತ್ತು ಮಹಾದೇವ ಇವರ ಮದ್ಯೆ ತಂಟೆ ತಕರಾರು ಇತ್ತು ಅಂದರೆ ಸರಿಯಲ್ಲ.

ನಮ್ಮ ಮಾರುತಿ ದತ್ತು ಪಾಟೀಲ , ದೀಲಿಪ ವಸಂತ ಪಾಟೀಲ ಗಣಪತಿ ತುಕಾರಾಮ ಪಾಟೀಲ , ವಿಠ್ಠಲ ಪಾಟೀಲ , ವಿಷ್ಣು ತುಕಾರಾಮ ಪಾಟೀಲ ಇವರು ನನ್ನ ಸಂಬಂಧಿಕರು ಅಂದರೆ ಸಾಕ್ಷಿ ಅವರು ನಮ್ಮ ಬಾಹು ಬಂದುಗಳು ಮತ್ತು ಅಕ್ಕ ಪಕ್ಕದವರು ಅಂತಾ

ಹೇಳುತ್ತಾರೆ. ಮಾರುತಿ ದತ್ತು ಪಾಟೀಲ ಇತನು ಮಹಾರಾಷ್ಟ್ರದ ಟಾಕಳಿ ಗ್ರಾಮದವರು ಮತ್ತು ನನ್ನ ಸಂಬಂಧಿಕ ಅಂದರೆ ನಿಜ. ಮೇಲೆ ಹೇಳಿದ ಪಂಚರಿಗೆ ನನ್ನ ಅಜ್ಜ ರಾಮಾ ಆತನ ಸಹೋದರ ಲಕ್ಷ್ಮಣ ಇತನ ಮಗ ಬಾಳಾಸಾಹೇಬ ಮತ್ತು ಇನ್ನೊಬ್ಬ ಸಹೋದರ ಮಾಹಾದೇವ ಕೂಡಿಕೊಂಡು ಅವರ ಆಸ್ತಿಗಳ ತಂಟೆ ತಕರಾರಿನ ವಿಷಯವಾಗಿ ಐಕಟ್ಟ ಪತ್ರ ಬರೆದುಕೊಟ್ಟಿದ್ದರು ಅಂದರೆ ನಿಜ. ಈಗ ನನಗೆ ತೋರಿಸಿದ ದಾಖಲೆ ಸದರಿ ಐಕಟ್ಟ ಪತ್ರ ಇದೆ ಅಂದರೆ ನಿಜ. ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಮರಾಠಿ ಬಾಷೆಯ ಐಕಟ್ಟ ಪತ್ರವನ್ನು ನಿಡಿಃ1 ಮತ್ತು ಅದರ ಕನ್ನಡ ಭಾಷಾಂತರವನ್ನು ನಿಡಿಃ 1 ಎ ಅಂತಾ ಗುರುತಿಸಲಾಯಿತು. ನನ್ನ ರಾಮಾಹರಿ ಹೆಬ್ಬಟ್ಟಿನ ಗುರುತು ಸಹಿ ಅಂತಾ ಹಾಕುತ್ತಿದ್ದ ಅಂದರೆ ನಿಜ. ಅದೇ ರೀತಿ ಆತನ ಸಹೋದರ ಮಹಾದೇವ ಸಹ ಹೆಬ್ಬಟ್ಟಿನ ರುಜು ಹಾಕುತಿದ್ದ ಅಂದರೆ ನಿಜ. 1 ನೇ ಪ್ರತಿವಾದಿ ಬಾಳಾಸಾಹೇಬ ಆಂಗ್ಲ ಬಾಷೆಯಲ್ಲಿ ಸಹಿ ಮಾಡುತ್ತಾನೆ. ನಿಡಿಃ1 ರಲ್ಲಿಯ ಮೊದಲನೇ ಹೆಬ್ಬಟ್ಟಿನ ಗುರುತು ರಾಮಾಹರಿ ಇತನ ಹೆಬ್ಬಟ್ಟು ಇದೆ ಅಂದರೆ ನಿಜ. 2 ನೇ ಹೆಬ್ಬಟ್ಟಿನ ಗುರುತು ಮಹಾದೇವ ಇತನಿಗೆ ಸೇರಿದ್ದು ಅಂದರೆ ನಿಜ. ನಿಡಿಃ1 ರಲ್ಲಿ 1 ನೇ ಪ್ರತಿವಾದಿ ಬಿ ಎಲ್ ಪಾಟೀಲ ಅಂತಾ ಆಂಗ್ಲ ಬಾಷೆಯಲ್ಲಿ ಸಹಿ ಮಾಡಿದ್ದಾನೆ ಅಂದರೆ ನಿಜ. ನಿಡಿಃ 1 ರಲ್ಲಿ ಪಂಚರು ನಿರ್ಣಯಿಸಿದಂತೆ ನನ್ನ ಅಜ್ಜ ರಾಮಾ, ಆತನ ಸಹೋದರ ಮಹಾದೇವ ಮತ್ತು 1 ನೇ ಪ್ರತಿವಾದಿ ಬಾಳಾಸಾಹೇಬ ತಮ್ಮ ತಮ್ಮ ಆಸ್ತಿಗಳನ್ನು ವಹಿವಾಟು ಮಾಡುತ್ತಾ ಬಂದಿದ್ದರು ಅಂದರೆ ನಿಜ.

2 ನೇ ಪ್ರತಿವಾದಿ ಅಶೋಕ ನೌಕರಿ ಮಾಡುತ್ತಾನೆ ಅಂದರೆ ನಿಜ. 1 ಮತ್ತು 2 ನೇ ಪ್ರತಿವಾದಿಯರ ಮನೆತನದ ವ್ಯವಹಾರ 1 ನೇ ಪ್ರತಿವಾದಿ ಮಾಡುತ್ತಾನೆ ಅಂದರೆ ನಿಜ. ದಾವೇದ ಶಿಪ್ಪೂರ ಗ್ರಾಮದ ಸರ್ವೆ ನಂಃ 615 ರಲ್ಲಿ ನನ್ನ ಅಜ್ಜ ಮತ್ತು ಆತನ ಸಹೋದರರಿಗೆ ತಲಾ 1/3 ಹಿಸ್ಸೆ ಇರುತ್ತದೆ ಅಂದರೆ ಸರಿಯಲ್ಲ. ಐಕಟ್ಟ ಪತ್ರ ದಿನಾಂಕಃ 04.05.1980 ರಲ್ಲಿ ಆಗಿದೆ ಅಂದರೆ ನಿಜ. ಐಕಟ್ಟ ಪತ್ರ ಬರೆಯಲು ರಾಮುಹರಿ ಪಾಟೀಲ ಚಾಪಾ ಕಾಗದಗಳನ್ನು ಖರೀದಿಸಿದ್ದಾನೆ ಅಂದರೆ ನಿಜ. ಐಕಟ್ಟ ಪತ್ರದಲ್ಲಿ ನಿರ್ಣಯಿಸಿದ ಪ್ರಕಾರ ರಾಮಾಹರಿ ಮತ್ತ ಆತನ ಸಹೋದರರು ದಿನಾಂಕಃ

16.06.1980 ರಲ್ಲಿ ವಾಟ್ನಿ ಪತ್ರ ಮಾಡಿಕೊಂಡಿದ್ದರು ಅಂದರೆ ನಿಜ. ವಾಟ್ನಿ ಪತ್ರದಲ್ಲಿ ಬರೆದ ಪ್ರಕಾರ ರಾಮಾಹರಿ ಮತ್ತು ಆತನ ಸಹೋದರರು ತಮ್ಮ ತಮ್ಮ ಹಿಸ್ಸೆಗೆ ಬಂದ ಆಸ್ತಿಗಳನ್ನು ವಹಿವಾಟ ಮಾಡುತ್ತಾ ಬಂದಿದ್ದರು ಅಂದರೆ ನಿಜ.

ಸರ್ವೆ ನಂಃ 308 ಚಿಕ್ಕ ಜಮೀನು ಇದ್ದುದ್ದರಿಂದ ನನ್ನ ಅಜ್ಜ ರಾಮುಹರಿ ಮಾರಾಟ ಮಾಡಲು ನಿರ್ಧರಿಸಿದ್ದ ಅಂದರೆ ಸರಿಯಲ್ಲ. ನನ್ನ ಅಜ್ಜ ರಾಮುಹರಿ ಸದರಿ ಜಮೀನನ್ನು 1 ಮತ್ತು 2 ನೇ ಪ್ರತಿವಾದಿಯರಿಗೆ ಹಾಗೂ ಮಹಾದೇವ ಇವರಿಗೆ 1500 ರೂಗಳಿಗೆ ವ್ಯವಹಾರ ಮಾಡಿ ಅವರಿಗೆ ಮಾರಾಟ ಮಾಡಿದ್ದಾನೆ ಅಂದರೆ ಸರಿಯಲ್ಲ. ಈ ಬಗ್ಗೆ ಡೈರಿ ನಂಃ 2327 ಮಂಜುರು ಸಹ ಆಗಿದೆ ಅಂದರೆ ಸಾಕ್ಷಿ ಡೈರಿ ಆಗಿದೆ ಆದರೆ ನನ್ನ ಅಜ್ಜ ಹಣ ಪಡೆದಿಲ್ಲಾ ಅಂತಾ ಹೇಳುತ್ತಾರೆ. ಆನಂತರ ನನ್ನ ಅಜ್ಜ ಮತ್ತು ಆತನ ಸಹೋದರರು ವಾಟ್ನಿ ಪತ್ರ ದುರಸ್ಥಿ ಪತ್ರ ವನ್ನು ದಿನಾಂಕಃ 20.12.1986 ರಂದು ಮಾಡಿಕೊಂಡಿದ್ದಾರೆ ಅಂದರೆ ಸರಿಯಲ್ಲ. ಈಗ ನನಗೆ ತೋರಿಸಿದ ದಾಖಲೆ ವಾಟ್ನಿ ಪತ್ರದ ದುರಸ್ದಿ ಪತ್ರ ಇದೆ ಅಂದರೆ ಸರಿಯಲ್ಲ. ಸದರಿ ವಾಟ್ನಿ ದುರಸ್ಥಿ ಪತ್ರಕ್ಕೆ ರಾಜಾರಾಮ ಬಾಹು ಕದಮ, ಗಣಪತಿ ತುಕಾರಾಮ ಪಾಟೀಲ ಮತ್ತು ರಾವಸಾಹೇಬ ಮಹಾದೇವ ಪಾಟೀಲ ಸಾಕ್ಷಿ ಸಹಿ ಮಾಡಿದ್ದಾರೆ ಅಂದರೆ ಸರಿಯಲ್ಲ. ಸದರಿ ವಾಟ್ನಿ ದುರಸ್ಥಿ ಪತ್ರದ ಪ್ರಕಾರ ನನ್ನ ಅಜ್ಜ ರಾಮಾಹರಿ ಪಾಟೀಲ ಮತ್ತು ಆತನ ಇಬ್ಬರೂ ಸಹೋದರರು ಸರ್ವೆ ನಂಃ 615 ರಲ್ಲಿ ತಲಾ 1/3 ಹಿಸ್ಸೆ ಹೊಂದಿರುತ್ತಾರೆ ಅಂತಾ ನಮೂದಿಸಿರುತ್ತಾರೆ ಅಂದರೆ ಸುಳ್ಳು. ಮತ್ತು ಪತ್ರದ ಆಧಾರದ ಮೇಲೆ ದಾವೇದ ಆಸ್ತಿಗಳಿಗೆ ನಾನು ಸಂಪೂರ್ಣ ಮಾಲಿಕ ಇದ್ದೆನೆ ಅಂತಾ ಸುಳ್ಳು ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ. ಈಗಲೂ ಸಹ ನನ್ನ ಅಜ್ಜ ಮತ್ತು ಆತನ ಸಹೋದರರ ವಾರಸುದಾರರು ತಲಾ 1/3 ಹಿಸ್ಸೆದ ಜಮೀನುಗಳಲ್ಲಿ ವಹಿವಾಟು ಮಾಡುತ್ತಾರೆ ಅಂದರೆ ಸರಿಯಲ್ಲ. ದಾವೇದ ಸರ್ವೆ ನಂಃ 615 ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ಖೊಟ್ಟಿ ಮತ್ತು ಪತ್ರ ಹುಟ್ಟಿಸಿಕೊಂಡಿದ್ದೆವೆ ಅಂದರೆ ಸರಿಯಲ್ಲ. ಮತ್ತು ಪತ್ರದ ಪ್ರಕಾರ ದಾವೇದ ಆಸ್ತಿಗಳು ನನ್ನ ಕಬ್ಜಾದಲ್ಲಿಲ್ಲಾ ಅಂದರೆ ಸರಿಯಲ್ಲ. ನಾನು ಈ ಸರ್ವೆ ನಂಃ 615 ಆಸ್ತಿಗೆ ಮಾತ್ರ ದಾಖಲಿಸಿದ್ದೆನೆ. ಸರ್ವೆ ನಂಃ 615 ಹೊರತುಪಡಿಸಿ ಉಳಿದ ಆಸ್ತಿಗಳನ್ನು ಬ

**ದಿನಾಂಕಃ** 14-09-2023 **ಓ ಎಸ್ ನಂ.**107/2020(**ಪಿ.ಡಬ್ಲ್ಯೂ** 1)

ಹೊರತುಪಡಿಸಿ ಮೇಲೆ ವಾಟ್ನಿ ಪತ್ರ ಮತ್ತು ವಾಟ್ನಿ ದುರಸ್ಥಿ ಪತ್ರದ ಪ್ರಕಾರ ಸಾಗು ಮಾಡುತ್ತಿದ್ದೆವು ಅಂದರೆ ನಿಜ. ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳ ಪ್ರಮಾಣ ಪತ್ರ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ** ಶ್ರೀ ಜಿ ಬಿ ಎ ವಕೀಲರಿಂದ 3 ರಿಂದ 7 ನೇ ಪ್ರತಿವಾದಿಯರ ಪರಃ

ಶ್ರೀ ಜಿ ಬಿ ಎ ವಕೀಲರನ್ನು ಮತ್ತು 3 ರಿಂದ 7 ನೇ ಪ್ರತಿವಾದಿಯರನ್ನು ಕರೆಯಿಸಲಾಯಿತು ಗೈರು ಹಾಜರು ಇರುತ್ತಾರೆ. ಆದ್ದರಿಂದ ಪಾಟೀ ಸವಾಲು ಇಲ್ಲಾ ಅಂತಾ ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ** ಇಲ್ಲಾ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

**Sd/-**

ಹಿರಿಯ ದಿವಾಣಿ ನ್ಯಾಯಾಧೀಶರು, ಹುಕ್ಕೇರಿ
ಸಂಚಾರಿ ನ್ಯಾಯಾಲಯ ಸಂಕೇಶ್ವರ